**CW : 2**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.89/2024

ಸಾಕ್ಷಿದಾರರ ಹೆಸರು : ರಾಜೇಶ್ವರಿ

ಗಂಡನ ಹೆಸರು : ಗೋಪಾಲಕೃಷ್ಣ

ಪ್ರಾಯ : 39 ವರ್ಷ

ಉದ್ಯೋಗ ಗೃಹಿಣಿ

ವಾಸಸ್ಥಳ : ಸುಳ್ಯಪದವು ಮನೆ, ಪುತ್ತೂರು

ದಿನಾಂಕ:**06.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಮೃತ ಗೋಪಾಲಕೃಷ್ಣ ನನ್ನ ಗಂಡ. ಚಾಸಾ-1 ನನ್ನ ಮಗಳು. ನಾವು ಇರುವ ಮನೆ ಸರ್ವೆ ನಂ. 26 /1a/1a/1a3a2 ಅಗಿದು ಅದು ನನ್ನ ಅತ್ತೆ ಲೀಲಾವತಿಯವರಿಗೆ ಸೇರಿದ ಜಾಗವಾಗಿರುತ್ತದೆ. ಸ್ಥಳ ಸುಳ್ಯಪದವು ಎನ್ನುವ ಸ್ಥಳದಲ್ಲಿರುತ್ತದೆ. ನನ್ನ ಗಂಡ ಸಾಮಾಜಿಕ ಕಾರ್ಯಕರ್ತರಾಗಿದ್ದು ಕೃಷಿ ಹಾಗೂ ಶಾಮಿಯಾನ ಕೆಲಸ ಮಾಡುತ್ತಿದ್ದರು. ಘಟನೆಯಾದ 3 ದಿನಗಳ ಮೊದಲು ನಮ್ಮ ಮನೆಯ ಅಂಗಳದಲ್ಲಿ ಜೀವನ್ ಎನ್ನುವವರಿಂದ ಕೆಲಸ ಮಾಡಿಸಲಾಗುತ್ತಿತ್ತು. ಕೂಲಿ ಕೆಲಸಕ್ಕಾಗಿ ಚಾಸಾ-4 ಬರುತ್ತಿದ್ದರು. ಅಂಗಳವನ್ನು ದೊಡ್ಡದು ಮಾಡಲು ಸುತ್ತ ಇದ್ದ ಕಾಡು ಮರಗಳನ್ನು ಕಡಿಯುತ್ತಿದ್ದರು.

ದಿ.4-6-23 ರಂದು ರಾತ್ರಿ ನನ್ನ ಗಂಡ ನನ್ನಲ್ಲಿ ನಾಳೆ ಬೆಳಗ್ಗೆ 6.00 ಗಂಟೆ ಸಮಯಕ್ಕೆ ಟಿಪ್ಪರ್ ಬರುತ್ತದೆ, ಮರದ ದಿಮ್ಮಿಯನ್ನು ಮಿಲ್ಲಿಗೆ ಹಾಕುವ ಎಂದು ತಿಳಿಸಿದರು. ದಿ.5-6-23 ರಂದು ಬೆ 6.00 ಗಂಟೆಗೆ ಆರೋಪಿಯು ಟಿಪ್ಪರ್ ಲಾರಿಯನ್ನು ಮನೆಯ ಅಂಗಳಕ್ಕೆ ತೆಗೆದುಕೊಂಡು ಬಂದನು. ಅಲ್ಲಿಗೆ ಜೀವನ್ ರವರ ಜೆ ಸಿ ಬಿ ಕೂಡಾ ಬಂತು ಅವರ ಜೊತೆ ಚಾಸ-4 ಕೂಡಾ ಬಂದಿದ್ದರು. ಅವರನ್ನು ಹೊರತುಪಡಿಸಿ ಸ್ಥಳದಲ್ಲಿ ನಾನು ಮತ್ತು ಚಾಸಾ-1 ಇದ್ದೆವು.

ಆ ಸಮಯದಲ್ಲಿ ಮನೆಯ ಅಂಗಳದಲ್ಲಿ ಹಾಕಲಾಗಿದ್ದ ದಿಮ್ಮಿಯನ್ನು ಜೆಸಿಬಿಯಿಂದ ಟಿಪ್ಪರ್ ಲಾರಿಗೆ ಹಾಕಿ ರಸ್ತೆ ಸರಿಮಾಡಿಕೊಂಡು ಜೆ ಸಿ ಬಿ ತೆಗೆದುಕೊಂಡು ಚಾಸಾ-3 ಸ್ಥಳದಿಂದ ಚಾಸಾ-4 ರವರನ್ನು ಕರೆದುಕೊಂಡು ಹೋದರು. ಆರೋಪಿ ಟಿಪ್ಪರ್ ಲಾರಿಯ ಚಾಲಕನ ಸ್ಥಳದಲ್ಲಿ ಹೋಗಿ ಕುಳಿತರು. ನನ್ನ ಗಂಡನಿಗೆ ಟಿಪ್ಪರ್ ಲಾರಿಯ ಎಡಬದಿಯ ಬಾಗಿಲು ಹಾಕಲು ಆರೋಪಿ ತಿಳಿಸಿದರು. ಬಾಗಿಲು ಹಾಕುವ

ಸಮಯದಲ್ಲಿ ಆರೋಪಿ ಯಾವುದೇ ಸೂಚನೆ ಕೊಡದೇ ಟಿಪ್ಪರ್ ಲಾರಿಯನ್ನು ಚಲಾಯಿಸಿದ ಕಾರಣ ಟಿಪ್ಪರ್ ಲಾರಿಯಲ್ಲಿ ಲೋಡ್ ಮಾಡಲಾಗಿದ್ದ ಮರದ ದಿಮ್ಮಿ ನನ್ನ ಗಂಡನ ಮೇಲೆ ಬಿದ್ದು ಅವರಿಗೆ ತಲೆಗೆ ಮತ್ತು ಎದೆಭಾಗಕ್ಕೆ ಪೆಟ್ಟಾಗಿತ್ತು. ಆಗ ಸಮಯ ಬೆ.6.30 ಆಗಿತ್ತು. ಆಗ ನನ್ನ ಮಗಳು ಹಾಗೂ ನಾನು ಬೊಬ್ಬೆ ಹಾಕಿದೆವು. ಆಗ ತಕ್ಷಣ ಚಾಸಾ-3 ಮತ್ತು4 ಸ್ಥಳಕ್ಕೆ ಬಂದರು. ಆರೋಪಿ ಸಹ ಲಾರಿಯಿಂದ ಇಳಿದು ಬಂದನು. ನಾನು ನೋಡಿದಾಗ ನನ್ನ ಗಂಡನ ತಲೆಗೆ ತೀವ್ರ ಸ್ವರೂಪದ ಗಾಯವಾಗಿ ರಕ್ತ ಬರುತ್ತಿತ್ತು. ಆಗ ಸ್ಥಳಕ್ಕೆ ಮನೆಯ ಅಕ್ಕಪಕ್ಕದವರೂ ಕೂಡಾ ಬೊಬ್ಬೆ ಕೇಳಿ ಬಂದರು. ನಂತರ ಕಾರ್ನಲ್ಲಿ ನನ್ನ ಗಂಡನನ್ನು ಪುತ್ತೂರಿನ ಸರ್ಕಾರೀ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದೆವು. ನನ್ನ ಗಂಡನನನ್ನು ಪರೀಕ್ಷಿಸಿದ ವೈದ್ಯರು ನನ್ನ ಗಂಡ ಮೃತರಾಗಿರುವ ಬಗ್ಗೆ ತಿಳಿಸಿದರು. ನನ್ನ ಗಂಡ ಮೃತಪಡದು ಆರೋಪಿಯ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯತನ ಕಾರಣವಾಗಿರುತ್ತದೆ.

ಆರೋಪಿಯ ಹೆಸರು ಅವಿನಾಶ್ ಆಗಿದ್ದು ಆತ ಘಟನೆಯ ಸಮಯದಲ್ಲಿ ಚಲಾವಣೆ ಮಾಡಿದ ಟಿಪ್ಪರ್ ಲಾರಿಯ ನೊಂದಣಿ ಸಂ ಕೆಎ-21-ಸಿ-1414 ಆಗಿರುತ್ತದೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಟಿಪ್ಪರ್ ಲಾರಿ ಹಾಗೂ ಮರದ ದಿಮ್ಮಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಟಿಪ್ಪರ್ ಲಾರಿ ಹಾಗೂ ಮರದ ದಿಮ್ಮಿಯ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

**CW : 2**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.